**ದಿನಾಂಕ 17.06.2026 ರಂದು ಸಾಕ್ಷಿಗೆ ಪ್ರಮಾಣ ವಚನವನ್ನು ಬೋಧಿಸಲಾಯಿತು.**
**ಪಾಟೀ ಸವಾಲು : ಶ್ರೀ ಎಸ್ ಜೆ ಡಿ . 2ನೇ ಎದುರುದಾರರ ಪರ ವಕೀಲರಿಂದಃ**

ನಾನು ದ್ವಿಚಕ್ರ ವಾಹನ ಮೆಕಾನಿಕ್ ಆಗಿ ಕೆಲಸ ಮಾಡುತ್ತಿದ್ದೆ. ಮೆದಲು ನಾನು ಪ್ರತಿ ದಿನ ರೂ. 500-1000 ರೂ ಆದಾಯ ಹೊಂದಿದ್ದೆ. ನಾನು ಮೆಕಾನಿಕ್ ಅಂಗಡಿ ಇಟ್ಟುಕೊಂಡಿದ್ದೆ ಎಂದು ಹೇಳಲು ದಾಖಲೆ ಹಾಜರುಪಡಿಸಿಲ್ಲ. ನಾನು ಅಪಘಾತದ ದಿನ ಚಲಾಯಿಸುತ್ತಿದ್ದ ದ್ವಿಚಕ್ರ ವಾಹನದ ಮಾಲಿಕತ್ವ ನನ್ನ ಹೆಂಡತಿಯದು ಇರುತ್ತದೆ. ಸದರಿ ವಾಹನಕ್ಕೆ ಊರ್ಜಿತ ವಿಮೆ ಮತ್ತು ನಾನು ಚಾಲನಾ ಪರವಾನಿಗೆ ಹೊಂದಿದ್ದೆ. ದ್ವಿ ಚಕ್ರ ವಾಹನಕ್ಕೆ ಸಂಬಂದಿಸಿದ ದಾಖಲೆಗಳನ್ನು ನಾನು ನ್ಯಾಯಾಲಯಕ್ಕೆ ಹಾಜರುಪಡಿಸಿಲ್ಲ. ಅಪಘಾತವಾದ ದಿನವೇ ದೂರು ದಾಖಲಿಸಲಾಗಿದೆ. ಮೂರು ದಿನ ತಡವಾಗಿ ದೂರು ದಾಖಲಿಸಲಾಗಿದೆ ಎಂದರೆ ನನಗೆ ಗೊತ್ತಿಲ್ಲ. ನಿಪಿ 2 ರ ದೂರಿನಲ್ಲಿ ಎನು ಬರೆದಿದೆ ನನಗೆ ಗೊತ್ತಿದೆ. ಅಪಘಾತದ ಸಮಯ ರಾತ್ರಿ 8 ಗಂಟೆ ಎಂದರೆ ಸರಿ. ನನಗೆ ಮಧ್ಯಪಾನ ಸೇವನೆ ಚಟ ಇದೆ ಎಂದರೆ ಸರಿಯಲ್ಲ. ನಾನು ರಾತ್ರಿ ಹೊತ್ತು ಮಧ್ಯ ಸೇವನೆ ಮಾಡಿ ವಾಹನ ಚಾಲನೆ ಮಾಡಿಕೊಂಡು ಹೋಗುವಾಗ ಸ್ಕಿಡ್ ಆಗಿ ಬಿದ್ದು ಗಾಯ ಮಾಡಿಕೊಂಡಿದ್ದೇನೆಂದರೆ ಸರಿಯಲ್ಲ.

1 ನೇ ಎದುರುದಾರರು ನನಗೆ ಚೆನ್ನಾಗಿ ಪರಿಚಯ ಎಂದರೆ ಸರಿಯಲ್ಲ. ಅಪಘಾತ ಪರಿಹಾರ ಪಡೆಯುವ ಸಲುವಾಗಿ 1 ನೇ ಎದುರುದಾರರ ಜೊತೆ ಶಾಮೀಲಾಗಿ ಪೊಲಿಸರನ್ನು ಶಾಮೀಲು ಮಾಡಿಕೊಂಡು ಸುಳ್ಳು ದೂರು ದಾಖಲಿಸಿ ಸುಳ್ಳು ಅರ್ಜಿ ಸಲ್ಲಿಸಿರುತ್ತೇನೆಂದರೆ ಸರಿಯಲ್ಲ. ಅಪಘಾತ ರಸ್ತೆಯಲ್ಲಿ ಎರಡು

ಬದಿಯಿಂದ ಎರಡು ಬಾರಿ ವಾಹನಗಳು ಸರಾಗವಾಗಿ ಚಾಲನೆ ಮಾಡಿಕೊಂಡು ಹೋಗುವಷ್ಟು ಅನುಕೂಲವಾಗಿದೆ ಎಂದರೆ ಸರಿಯಲ್ಲ. ನಿಪಿ **3** ರಂತೆ ರಸ್ತೆ ಮಧ್ಯೆ ಅಪಘಾತವಾಗಿದೆ ಎಂದರೆ ಸರಿ. ಅಪಘಾತ ಸ್ಥಳದಲ್ಲಿ ಬೀದಿ ದೀಪ ಇರಲಿಲ್ಲ ಎಂದರೆ ಸರಿಯಲ್ಲ. ಅಪಘಾತವಾದ ಸಮಯದಲ್ಲಿ ಅಪಘಾತ ಪಡಿಸಿದ ವಾಹನದ ಬಗ್ಗೆ ನನಗೆ ಗೊತ್ತಿರಲಿಲ್ಲ ಎಂದರೆ ಸರಿಯಲ್ಲ. ನನಗೆ ಅಪಘಾತ ಪಡಿಸಿದ ವಾಹನ ಹರಿಶಿನ ಬಣ್ಣದ ಬುಲೇರೋ ವಾಹನ. ನಾನು ಹೇಳುವ ವಾಹನ ಅಪಘಾತ ಪಡಿಸಿಲ್ಲ ವಾದ್ದರಿಂದ ವಾಹನದ ಬಗ್ಗೆ ನನಗೆ ಮಾಹಿತಿ ಇಲ್ಲ ಎಂದರೆ ಸರಿಯಲ್ಲ.

ಅಪಘಾತವಾದ ತಕ್ಷಣ ಕೊಳ್ಳೆಗಾಲದ ಸರ್ಕಾರಿ ಆಸ್ಪತ್ರೆಗೆ ನಂತರ ಮೈಸೂರಿನ ಬಿ ಆರ ಎಂ ಆಸ್ಪತ್ರೆಗೆ ದಾಖಲಾದೆ. ನಿಪಿ **6** ರ ಪ್ರಕಾರ ವಾಹನ ಚಾಲಕ ರಹದಾರಿ ಪರವಾನಗಿ ಇಲ್ಲದೆ ವಾಹನ ಚಾಲನೆ ಮಾಡಿದ ಬಗ್ಗೆ ಅಪಾದನೆ ಇದೆ ಎಂದರೆ ಸರಿ. ಮೈಸೂರಿನ ಬಿ ಆರ್ ಎಂ ಆಸ್ಪತ್ರೆಯಲ್ಲಿ ಒಂದು ತಿಂಗಳು ದಾಖಲಾಗಿದ್ದೆ. ಯಾವ ದಿನಾಂಕದಿಂದ ಯಾವ ದಿನಾಂಕದವರೆಗೆ ದಾಖಲಾಗಿದ್ದೆ ಎಂದರೆ ಸಾಕ್ಷಿ ಅಪಘಾತವಾದ ದಿನ ದಾಖಲಾಗಿದ್ದೆ ಎಂದು ಹೇಳುತ್ತಾರೆ. ನನಗೆ ಚಿಕಿತ್ಸೆ ನೀಡಿದ ವೈಧ್ಯರ ಹೆಸರು ನೆನಪಿಲ್ಲ. ನಾನು ಆಸ್ಪತ್ರೆಯಿಂದ ಬಿಡುಗಡೆ ಹೊಂದಿದ ನಂತರ ಈಗ **2-3** ತಿಂಗಳ ಹಿಂದೆ ಮತ್ತೆ ಚಿಕಿತ್ಸೆಗೆ ಆಸ್ಪತ್ರೆಗೆ ಹೋಗಿದ್ದೆ. ಅಪಘಾತದಲ್ಲಿ ನನಗೆ ಸಾದಾ ಗಾಯಗಳಾಗಿದ್ದರಿಂದ ಆಸ್ಪತ್ರೆಯಿಂದ ಬಿಡುಗಡೆ ಹೊಂದಿದ ನಂತರ ಮತ್ತೆ ಚಿಕಿತ್ಸೆ ಪಡೆದಿರುವುದಿಲ್ಲ ಎಂದರೆ ಸರಿಯಲ್ಲ. ಆದ್ದರಿಂದ ಮುಂದುವರಿದ ಚಿಕಿತ್ಸೆಯ ದಾಖಲೆಗಳನ್ನು ಹಾಜರುಪಡಿಸಿಲ್ಲ ಎಂದರೆ ಸರಿಯಲ್ಲ. ನನ್ನ ಮೂಳೆ ಮುರಿತ ಹೊಂದಿಕೊಂಡಿರುತ್ತದೆ ಎಂದರೆ ಸರಿಯಲ್ಲ. ಒಂದು ಲಕ್ಷ ಮೂವತ್ತು ಸಾವಿರ ಚಿಕಿತ್ಸೆ

ವೆಚ್ಚ ಆಗಿದೆ ಎಂದು ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ.

ಅಪಘಾತಕ್ಕೆ ಮೊದಲು ಪ್ರತಿ ತಿಂಗಳು ಮೂವತ್ತು ಸಾವಿರ ಆದಾಯ ಹೊಂದಿದ್ದೆ ಎಂದು ಹೇಳಲು ದಾಖಲೆ ಹಾಜರುಪಡಿಸಿಲ್ಲ. ನಾನು ಈಗಲೂ ಅದೇ ಕೆಲಸ ಮುಂದುವರಿಸಿಕೊಂಡು ಹೋಗುತ್ತಿದ್ದೇನೆಂದರೆ ಸರಿಯಲ್ಲ. ನಾನು ಈಗ 65 ವರುಷ ವಯಸ್ಸಾಗಿದ್ದರಿಂದ ವಯೋೀ ಸಹಜವಾಗಿ ಕೆಲಸ ಬಿಟ್ಟಿರುತ್ತೇನೆಂದರೆ ಸರಿಯಲ್ಲ. ಅಪಘಾತ ಸಮಯದಲ್ಲಿ 1 ನೇ ಎದುರುದಾರ ವಾಹನಕ್ಕೆ ರಹದಾರಿ ಪರವಾನಿಗೆ ಇಲ್ಲದ್ದರಿಂದ 2 ನೇ ಎದುರುದಾರ ಪರಿಹಾರ ಹಣ ಕೊಡಲು ಬಾಧ್ಯಸ್ಥರಾಗಿರುವುದಿಲ್ಲ ಎಂದರೆ ಸರಿಯಲ್ಲ.

**ಮರುವಿಚಾರಣೆ ಇಲ್ಲ.**

(ಸಾಕ್ಷಿಯು ಕೊಟ್ಟ ಸಾಕ್ಷ್ಯವನ್ನು ಬಹಿರಂಗ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಗಣಕೀಕರಿಸಿದೆ)

(ಸಾಕ್ಷಿಗೆ ಸಾಕ್ಷ್ಯವನ್ನು ಓದಿ ಕೇಳಿ ಸರಿ ಇದೆ ಎಂದು ಒಪ್ಪಿದ್ದಾರೆ)

**ಹಿರಿಯ ಸಿವಿಲ್ ನ್ಯಾಯಾಧೀಶರು**
**ಮತ್ತು ಎಂ.ಎ.ಸಿ.ಟಿ., ತಿ.ನರಸೀಪುರ.**